**ಸಾಕ್ಷಿಗೆ ದಿನಾಂಕ 08.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.ಬಿ.ಎನ್.ಎಸ್. ವಕೀಲರಿಂದ:**

1. ನಾನು ಈ ಪ್ರಕರಣದಲ್ಲಿ ವೈದ್ಯ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ಗಾಯಾಳುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿದಾರರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 21 ಮತ್ತು 22 | 2 ಅಂಗನ್ಯೂನತಾ ಮೌಲ್ಯಮಾಪನ ಶೀಟುಗಳು |
| ನಿ.ಪಿ 23 | ಕ್ಲಿನಿಕಲ್ ನೋಟ್ |
| ನಿ.ಪಿ 24 | ಕೇಸ್ ಶೀಟ್ |
| ನಿ.ಪಿ 25 | 30 ಎಕ್ಸ್-ರೇಗಳು |
| ನಿ.ಪಿ 26 | 8 ಸಿಟಿ ಸ್ಕಾನ್ ಫಿಲ್ಮ್‌ಗಳು |

**ಪಾಟೀ ಸವಾಲು: *1* ನೇ ಎದುರುದಾರರ ಪರ ಶ್ರೀಮತಿ ಕೆ.ಐ.ಜಿ. ವಕೀಲರಿಂದ:**

1. ನಾನು ಅರ್ಜಿದಾರರಿಗೆ ವೈಯಕ್ತಿಕವಾಗಿ ಶಸ್ತ್ರಚಿಕಿತ್ಸೆ ಮಾಡಿರುತ್ತೇನೆ. ಅರ್ಜಿದಾರರು ಆಸ್ಪತ್ರೆಗೆ ದಾಖಲಾದಾಗ ಮೂಳೆಮುರಿತ ಉಂಟಾಗದೇ ತರಚಿದ ಗಾಯಗಳು ಮಾತ್ರ ಆಗಿದ್ದವು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮೂಳೆಮುರಿತ ಉಂಟಾಗಿದೆ ಎಂದು ಅವರನ್ನು ಪರೀಕ್ಷಿಸಿ ಎಕ್ಸ್ ರೇ ಯನ್ನು ನೋಡಿದಾಗ ತಿಳಿದಿರುತ್ತದೆ. ಅರ್ಜಿದಾರರ ಕೋರಿಕೆಯ ಮೇರೆಗೆ ಹೆಚ್ಚುವರಿಯಾಗಿ ದೈಹಿಕ ಅಂಗನ್ಯೂನತೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಈಗಲೂ ಮುಂಚಿನಂತೆ ಕೆಲಸ ಮಾಡಲು ಸಮರ್ಥರಿರುತ್ತಾರೆ ಎಂದರೆ ಸರಿಯಲ್ಲ. ನಾನು ನೀಡಿರುವ ಅಂಗನ್ಯೂನತಾ ಶೇಕಡಾವಾರು

ಪ್ರಮಾಣ ಅತಿ ಹೆಚ್ಚಿನಿಂದ ಕೂಡಿದ್ದು ಹಾಗೂ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆ ಹೊರಡಿಸಿರುವ ನಿಯಾಮಾವಳಿಗಳ ಅನ್ವಯ ಇರುವುದಿಲ್ಲ ಎಂದರೆ ಸರಿಯಲ್ಲ.

2. ಅರ್ಜಿದಾರರಿಗೆ ಉಂಟಾಗಿರುವ ಅಂಗನ್ಯೂನತೆಯು ಅಪಘಾತದಿಂದ ಆಗಿದ್ದಲ್ಲ, ಅದು ತಪ್ಪಾಗಿ ಮಾಡಿರುವ ಶಸ್ತ್ರಚಿಕಿತ್ಸೆಯಿಂದ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮುಂದುವರೆದ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇಲ್ಲದೇ ಇದ್ದರೂ ಸಹ, ಮುಂದುವರೆದ ಶಸ್ತ್ರಚಿಕಿತ್ಸೆಗೆ ಸಲಹೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಉಂಟಾಗಿರುವ ಮೂಳೆಮುರಿತಗಳನ್ನು ಅವಲೋಕಿಸಿದರೆ ಅಪಘಾತದಿಂದಾದ ಗಾಯಗಳು ಅಲ್ಲ ಎಂದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರು ಅಪಘಾತದಲ್ಲಿ ಕೇವಲ ಸಾಮಾನ್ಯ ಸ್ವರೂಪದ ಗಾಯಗಳು ಹೊಂದಿದ್ದು ತೀವ್ರ ಸ್ವರೂಪದ ಗಾಯಗಳು ಅಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಚಲನ ವಲನ ಶಕ್ತಿ ಕುಂದಿದೆ ಎಂದು ಅಭಿಪ್ರಾಯ ಪಟ್ಟಿರುವುದು ತಪ್ಪಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚಿನ ಅಂಗನ್ಯೂನತೆ ನಿರ್ಧರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: *2* ನೇ ಎದುರುದಾರರ ಏಕ-ಪಕ್ಷೀಯ.**

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**